

**ಡಾ. ವಿನೋದ ಛೆಬ್ಬಿ**
ಲೈಂಗಿಕ, ದಾಂಪತ್ಯ ಮತ್ತು ಮನೋಚಿಕಿತ್ಸಕರು

**ಯಾರೊಡನೆಯೂ ಹೇಳಿಕೊಳ್ಳಲಾಗದ ಲೈಂಗಿಕ, ದಾಂಪತ್ಯ ಮತ್ತು ಮಾನಸಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸುವ ಅಂಕಣವಿದು. ನೀವೂ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು.**

✉ ನನ್ನ ಹೆಂಡತಿಗೆ 40 ವರ್ಷ. ಆರು ತಿಂಗಳ ಹಿಂದೆ ಆಕೆಗೆ ಗರ್ಭಕೋಶದಲ್ಲಿ ಫ್ರೈಬ್ರಾಯ್ಡ್ ಆಗಿ ಗರ್ಭಕೋಶ ತೆಗೆಯಿಸಬೇಕಾಯಿತು. ಆಪರೇಷನ್ ವೇಳೆ ಎಂಟು ಜನ ವೈದ್ಯಕೀಯ ವಿದ್ಯಾರ್ಥಿಗಳು (ಗಂಡು) ಇದ್ದರಂತೆ. ಆಪರೇಷನ್‌ನ ವೀಡಿಯೋ ಚಿತ್ರೀಕರಣ ಮಾಡಿದ್ದು, ಅದನ್ನು ನನಗೂ ತೋರಿಸಿದರು. ಆಪರೇಷನ್ ಸಮಯದಲ್ಲಿ ತೊಡಿಸಿದ್ದ ಬಟ್ಟೆಯನ್ನು ಮೇಲೆ ಸರಿಸಿದ್ದರಿಂದ ಸ್ತನಗಳಿಂದ ಕೆಳಭಾಗವನ್ನು ಪೂರ್ಣ ಬೆತ್ತಲೆ ಮಾಡಲಾಗಿತ್ತು. ಯೋನಿಯನ್ನು ಅಗಲಿಸಿ ಮೂತ್ರನಳಿಕೆಯನ್ನು ತೂರಿಸಿದ್ದು, ಬೆನ್ನುಹುರಿಯ ಕೆಳಭಾಗದಲ್ಲಿ ಅನಸ್ತೀಶಿಯ ಕೊಡುವಾಗ ಪೂರ್ಣ ಬೆತ್ತಲು ಮಾಡಿ ಮಂಡಿಗಾಲು ಊರಿಸಿ ಡಬ್ಬು ಮಲಗಿಸಿದ್ದು ಇತ್ಯಾದಿ ಚಿತ್ರೀಕರಿಸಲಾಗಿದೆ. ಆಗ ನನ್ನ ಹೆಂಡತಿಯ ಹಿಂಭಾಗ ಮತ್ತು ಯೋನಿಯ ಭಾಗ ಪೂರ್ಣ ವೀಡಿಯೋನಲ್ಲಿ ಗೋಚರವಾಗಿದೆ. ಹಲವಾರು ಪುರುಷರ ಮಧ್ಯೆ ಈ ರೀತಿ ಬೆತ್ತಲೆಮಾಡಿ ಆಪರೇಷನ್ ಮಾಡಿರುವುದು ನಮ್ಮಿಬ್ಬರಿಗೂ ತುಂಬಾ ಮುಜುಗರವಾಗಿದೆ. ಹೆಂಡತಿಗಂತೂ ಸಂಭೋಗದಲ್ಲಿ ಆಸಕ್ತಿಯೇ ಇಲ್ಲದಂತಾಗಿದೆ. ನಮ್ಮ ಪ್ರಶ್ನೆಗಳೇನೆಂದರೆ ನಮ್ಮ ಅನುಮತಿ ಇಲ್ಲದೆ ವೀಡಿಯೋ ಮಾಡಬಹುದೇ, ಹಾಗೂ ಪುರುಷ ವಿದ್ಯಾರ್ಥಿಗಳನ್ನು ಕೊಠಡಿಯೊಳಗೆ ಬಿಟ್ಟುಕೊಳ್ಳಬಹುದೇ? ದಯವಿಟ್ಟು ಮಾರ್ಗದರ್ಶನ ಮಾಡಿ.

ನಿಮ್ಮ ಹೆಂಡತಿಯನ್ನು ಉದ್ದೇಶಿಸಿ ಉತ್ತರಿಸುತ್ತಿದ್ದೇನೆ. ಸ್ವಂತಕ್ಕೆ ಮತ್ತು ಸಂಗಾತಿಗೆ ಮಾತ್ರ ಮೀಸಲಾಗಿರುವ ಶರೀರದ ಭಾಗಗಳು ಸಂಬಂಧವಿಲ್ಲದವರೆದುರು ಬೆತ್ತಲೆಯಾಗಿ ಖಾಸಗಿತನವನ್ನು ಕಳೆದುಕೊಂಡಿರುವುದರಿಂದ ಆಗಿರುವ ಅವಮಾನ, ವ್ಯಥೆ ನನಗೆ ಅರ್ಥವಾಗಿದೆ. ಚಿತ್ರೀಕರಣದ ವಿಷಯ ನಿಮಗೆ ಗೊತ್ತಿಲ್ಲದಿದ್ದರೆ, ಮತ್ತು ಶಸ್ತ್ರಚಿಕಿತ್ಸೆ ಮಾಡುವ ವೈದ್ಯರು ಮಾತ್ರ ಹಾಜರಿದ್ದರೆ (ಅವರು ಒಂದುವೇಳೆ ಪುರುಷರಾಗಿದ್ದರೂ) ಈ ಸಮಸ್ಯೆಯೇ ಹುಟ್ಟುತ್ತಿರಲಿಲ್ಲ, ಅಲ್ಲವೆ? ಅದಿರಲಿ, ನಿಮ್ಮ ಭಾವನೆಗಳನ್ನು ಸ್ವಲ್ಪ ಹೊತ್ತು ಬದಿಗಿಟ್ಟು ಹೀಗೆ ಯೋಚಿಸಿ: ನಿಮಗೆ ಶಸ್ತ್ರಚಿಕಿತ್ಸೆ ಮಾಡಿ ನಿಮ್ಮನ್ನು ಗುಣಪಡಿಸಿದ (ಹಿರಿಯ) ಶಸ್ತ್ರವೈದ್ಯರು ತಮ್ಮ ಪರಿಣತಿಯನ್ನು ಹೇಗೆ ಪಡೆದಿರಬಹುದು? ಕೇವಲ ಪುಸ್ತಕ-ಉಪನ್ಯಾಸಗಳಿಂದ ಕಲಿತಿರಬಹುದೆ? ಅಥವಾ ಇತರ ಪರಿಣಿತರು ಶಸ್ತ್ರಕ್ರಿಯೆ ನಡೆಸುವಾಗ ಪಕ್ಕಕ್ಕಿದ್ದು ಒಂದೊಂದೇ ಹೆಜ್ಜೆಯನ್ನು ಗಮನಿಸಿ ಪ್ರಯತ್ನಿಸಿ, ಪ್ರತ್ಯಕ್ಷವಾಗಿ ಕಲಿತಿರಬಹುದೆ? ಒಂದುವೇಳೆ ಪುಸ್ತಕ- ಉಪನ್ಯಾಸಗಳಿಂದ ಮಾತ್ರ ಕಲಿತಿದ್ದು ಯಾವೊತ್ತೂ ಶಸ್ತ್ರಚಿಕಿತ್ಸೆಯನ್ನು ಪ್ರತ್ಯಕ್ಷವಾಗಿ ನೋಡಿಯೇ ಇಲ್ಲವೆಂದು ಗೊತ್ತಿದ್ದರೆ ಅವರಿಂದ ಶಸ್ತ್ರಕ್ರಿಯೆ ಮಾಡಿಸಿಕೊಳ್ಳಲು ಒಪ್ಪುತ್ತಿದ್ದಿರಾ? ಈ ದಿಕ್ಕಿನಲ್ಲಿ ಯೋಚಿಸಿದರೆ ಒಂದು ವಿಷಯ ನಿಚ್ಚಳವಾಗುತ್ತದೆ: ಯಾವುದೇ ಚಿಕಿತ್ಸೆಯ ಬಗೆಗೆ ಮುಂಚೆ ಮೊದಲು ಓದಿ ತಿಳಿದು, ಆಮೇಲೆ ನೋಡಿ- ಚರ್ಚಿಸಿ ತಿಳಿದು, ನಂತರವೇ ಮಾಡಲು ಕೈಹಾಕುತ್ತಾರೆ. ಅಂದರೆ ನೀವೀಗ 'ಪರಿಣತ' ಎಂದು ನಂಬಿರುವ ವೈದ್ಯರು ಒಂದು ಕಾಲದಲ್ಲಿ 'ಗಂಡು ವಿದ್ಯಾರ್ಥಿ'ಯಾಗಿ ಇತರ ಸ್ತ್ರೀರೋಗಿಗಳ ಶಸ್ತ್ರಕ್ರಿಯೆಯನ್ನು ವೀಕ್ಷಿಸುತ್ತಿದ್ದರು! ಆಗೊಂದು ವೇಳೆ ಆ ರೋಗಿಗಳೆಲ್ಲ ಇವರ ಹಾಜರಿಯನ್ನು ಪ್ರತಿಭಟಿಸಿದ್ದರೆ ನಿಮಗೆ ವೈದ್ಯರೇ ಸಿಗುತ್ತಿರಲಿಲ್ಲ! ಹಾಗೆಯೇ, ನಿಮ್ಮ ಶಸ್ತ್ರಕ್ರಿಯೆಯ ಸಂದರ್ಭದಲ್ಲಿ ಹಾಜರಿದ್ದ ಗಂಡು ವಿದ್ಯಾರ್ಥಿಗಳು ನಾಳಿನ ಪರಿಣತ ವೈದ್ಯರು: ಇವರಲ್ಲಿ ಯಾರಾದರೂ ಭವಿಷ್ಯದಲ್ಲಿ ನಿಮ್ಮ ಮಕ್ಕಳ ಶಸ್ತ್ರಚಿಕಿತ್ಸೆ ಮಾಡಬಹುದು! ವೈದ್ಯಲೋಕದ ಬಗೆಗೆ ನೀವು ಕೆಲವು ತಥ್ಯಗಳನ್ನು ತಿಳಿಯಲೇಬೇಕು. ವೈದ್ಯವೃತ್ತಿಯ ಮೂಲ'ಪುರುಷ'ರು, ಸಂಶೋಧಕರು ಮತ್ತು ಕೊಡುಗೆ ನೀಡಿದವರೆಲ್ಲ ಬಹುತೇಕ ಪುರುಷರು. ಪಾಶ್ಚಿಮಾತ್ಯ ದೇಶಗಳಲ್ಲಿ ಬಹುತೇಕ ಸ್ತ್ರೀರೋಗ ತಜ್ಞರೆಲ್ಲ ಪುರುಷರು! ಉತ್ತರ ಭಾರತದ ಮಹಿಳೆಯರು ಪುರುಷರ ವೈದ್ಯರ ಹತ್ತಿರ ನಿಸ್ಸಂಕೋಚವಾಗಿ ತೋರಿಸಿಕೊಳ್ಳುತ್ತಾರೆ. (ದಕ್ಷಿಣದಲ್ಲಿ ಮಾತ್ರ ಮಹಿಳೆಯರು ಮಹಿಳಾ ವೈದ್ಯರನ್ನು ಬಯಸುವುದು ಅಪವಾದಾತ್ಮಕ ಎನ್ನಬಹುದು.) ಮಹಿಳಾ ವೈದ್ಯರ ಬಗೆಗೆ ಹೇಳುವುದಾದರೆ ಇವರು ಕಳೆದ 60-70 ವರ್ಷಗಳಿಂದ ಈಚೆಗೆ ವೈದ್ಯಕೀಯ ಲೋಕಕ್ಕೆ ಕಾಲಿಟ್ಟಿದ್ದಾರಷ್ಟೆ. (ಅಪವಾದವಾಗಿ ಡಾ.ಆನಂದೀಬಾಯಿ ಜೋಶಿ 1886ರಲ್ಲಿ ಭಾರತದ ಪ್ರಪ್ರಥಮ ಮಹಿಳಾ ವೈದ್ಯೆಯೆನ್ನಿಸಿಕೊಂಡರೂ ಒಂದು ವರ್ಷಕ್ಕೂ ಕಡಿಮೆ ಬದುಕಿದ್ದರು.) ವಿಚಿತ್ರವೆಂದರೆ ಶುಶ್ರೂಶೆ ಮಾಡುವ ದಾದಿಯರು ಮತ್ತು ಶಸ್ತ್ರಚಿಕಿತ್ಸೆಯ ಸಹಾಯಕ ಸಿಬ್ಬಂದಿಯವರು (ಗಂಡಿನ ಜನನಾಂಗದ ಚಿಕಿತ್ಸೆಯಿದ್ದರೂ) ಸರ್ವಸಾಮಾನ್ಯವಾಗಿ ಹೆಣ್ಣೇ ಆಗಿರುತ್ತಾರೆ. ಚರ್ಮ ಮತ್ತು ಗುಹ್ಯರೋಗಗಳ ತಜ್ಞರು ಸ್ತ್ರೀಯರಾಗಿದ್ದೂ ಪುರುಷರ ಜನನಾಂಗಗಳನ್ನು ಪರೀಕ್ಷಿಸುತ್ತಾರೆ; ಹಾಗೆಯೇ ಹಳ್ಳಿಗಳಲ್ಲಿ ಇರುವ ಪುರುಷ ವೈದ್ಯರು ಈಗಲೂ ಹೆರಿಗೆ ನಡೆಸುತ್ತಾರೆ. ಪ್ರತಿ ವೈದ್ಯವಿದ್ಯಾರ್ಥಿ(ನಿ)ಯೂ ಹೆಣ್ಣು-ಗಂಡು ಇಬ್ಬರ ಶರೀರಗಳ ಬಗೆಗೆ ಎಲ್ಲವನ್ನೂ ನಿಸ್ಸಂಕೋಚದಿಂದ ಕಲಿಯಲೇಬೇಕು. ಗಮನಿಸಿ: ಜಗತ್ತಿನಲ್ಲೆಲ್ಲೂ ಮಹಿಳೆಯರಿಗಾಗಿ ಮೀಸಲಾದ ವೈದ್ಯಕೀಯ ವಿದ್ಯಾಸಂಸ್ಥೆಗಳಿಲ್ಲ! ಇದರರ್ಥ ಇಷ್ಟೆ: ವೈದ್ಯಕೀಯ ಲೋಕದಲ್ಲಿ ಹೆಣ್ಣುಗಂಡುಗಳೆಂಬ ಭೇದವಿಲ್ಲ. ಇನ್ನು ಚಿತ್ರೀಕರಣದ ಬಗೆಗೆ. ಇದು ಮೊಬೈಲ್ ಮೂಲಕ ನಡೆಯುವ ಅಶ್ಲೀಲ ವ್ಯವಹಾರದ ಹಾಗಲ್ಲ; ನಿಮಗಾಗಿ ಇರುವ ದಾಖಲೆ. ನಾಳೆ ಉದರದಲ್ಲೇನಾದರೂ ಹೆಚ್ಚುಕಡಿಮೆಯಾದರೆ ಅದು ಶಸ್ತ್ರಚಿಕಿತ್ಸೆಯ ಪರಿಣಾಮವೇ ಹೇಗೆ ಎನ್ನುವುದಕ್ಕೆ ಕಾನೂನುಬದ್ಧ ಸಾಕ್ಷಿಯನ್ನು ಒದಗಿಸುತ್ತದೆ. ಇನ್ನು ಪರಿಹಾರ: ವೈದ್ಯಲೋಕದಲ್ಲೇ ಇಲ್ಲದ ಹೆಣ್ಣುಗಂಡಿನ ಭೇದಭಾವ ನಿಮಗೆ ಬೇಡ. "ಬೆತ್ತಲೆಯಾದ ನನ್ನನ್ನು ಎಷ್ಟೊಂದು ಗಂಡಸರು ನೋಡಿದರಲ್ಲ!" ಎನ್ನುವುದನ್ನು ಮರೆತು, "ನನ್ನ ಶರೀರದಿಂದ ಎಷ್ಟೆಲ್ಲ ವಿದ್ಯಾರ್ಥಿಗಳು ಪಾಠ ಕಲಿತು ಕೃತಾರ್ಥರಾದರಲ್ಲ! ಇವರೆಲ್ಲರಿಗೂ ಕಲಿಯಲು ನಾನು ಎಷ್ಟೊಂದು ಸಹಾಯ ಮಾಡಿದೆ!" ಎಂದು ಧನ್ಯತೆಯ ಭಾವವಿರಲಿ. ಇಷ್ಟಕ್ಕೂ ಮೀರಿ ಕಸಿವಿಸಿ ಉಳಿದಿದ್ದರೆ ತಾವು ಸತ್ತ ನಂತರ ತಮ್ಮ ವೈದ್ಯಕೀಯ ಪಾಠಗಳಿಗೆ ದೇಹದಾನ ಮಾಡುವವರನ್ನು ನೆನೆಸಿಕೊಳ್ಳಿ. ಇಷ್ಟಕ್ಕೂ ಸರಿಹೋಗದಿದ್ದರೆ ಈ ಉದಾ.ಕಣ್ಣೆದುರು ಕಲ್ಪಿಸಿಕೊಳ್ಳಿ: ಉತ್ತರ ಕರ್ನಾಟಕದ ಹಳ್ಳಿಯೊಂದರ (ಹೆಸರು ಬೇಡ) ರಸ್ತೆಯ ಬದಿಯಲ್ಲಿ ಮಹಿಳೆಯರು ಶೌಚಕ್ಕೆ ಕುಳಿತುಕೊಳ್ಳುತ್ತಾರೆ. ಆಗ ಅಕಸ್ಮಾತ್ತಾಗಿ ಪುರುಷರನ್ನು ಕಂಡರೆ ಏನು ಮಾಡುತ್ತಾರೆ ಗೊತ್ತೆ? ಖಾಸಗಿ ಭಾಗಗಳ ಸುತ್ತ ಇರುವ ಸೀರೆಯನ್ನು ಎತ್ತಿ ಮುಖ ಮುಚ್ಚಿಕೊಳ್ಳುತ್ತಾರೆ!

✉ ಅವಿವಾಹಿತ, ಕಾಂಡೋಮ್ ಇಲ್ಲದೆ ಹೆಣ್ಣಿನ ಸಹವಾಸ ಮಾಡಿದ್ದೆ. ನಂತರ ಶಿಶ್ನದ ಮಣಿಯ ಮೇಲೆ ಚಿಕ್ಕ ಗುಳ್ಳೆಗಳಾಗಿ ನೋವಾಗಿ ಒಡೆದು ಗಾಯವಾಯಿತು. ವೈದ್ಯರು ಹರ್ಪೆಸ್ ಕಾಯಿಲೆಯೆಂದು ಹೇಳಿ ಮಾತ್ರೆ ಕೊಟ್ಟರು. ಮಾತ್ರೆ ತಿನ್ನುವಾಗ ಗುಣವಾಯಿತು. ನಿಲ್ಲಿಸಿ ಸ್ವಲ್ಪ ದಿನದ ನಂತರ ಮತ್ತೆ ಬಂತು. ಹೀಗೆಯೇ ಆಗಾಗ ನಡೆಯುತ್ತಿದೆ. ಇದರ ನಡುವೆ ನನ್ನ ಮದುವೆ ನಿಶ್ಚಯವಾಗಿದೆ. ಸಲಹೆ ಕೊಡಿ.

ಶರೀರವನ್ನು ಹೊಕ್ಕ ಹರ್ಪೆಸ್ ವೈರಾಣು ಕಾಯಂ ಆಗಿ ನರಕೋಶಗಳಲ್ಲಿ ನೆಲೆಸುತ್ತದೆ. ಆಗಾಗ ಕಾಣಿಸಿಕೊಳ್ಳುತ್ತ ಮಾಯವಾಗುತ್ತ ಇರುತ್ತದೆ. ಸಮಾಧಾನದ ಸಂಗತಿ ಏನೆಂದರೆ ಕಾಲಕ್ರಮೇಣ ಲಕ್ಷಣಗಳ ತೀವ್ರತೆ ಮತ್ತು ಅನುಭವಿಸುವ ಅವಧಿ ಕಡಿಮೆಯಾಗುತ್ತ ಶಮನ ಕಾಲವು ದೀರ್ಘವಾಗುತ್ತದೆ. ಈ ರೋಗವನ್ನು ವಾಸಿಮಾಡಲು ಔಷಧಿ ಇಲ್ಲವಾದರೂ ಲಕ್ಷಣಗಳನ್ನು ಗುಣಪಡಿಸಲು ಔಷಧಿ ಇರುವುದರಿಂದ ಹೆಚ್ಚು ಯೋಚಿಸಬೇಕಿಲ್ಲ. ಪರಿಹಾರಕ್ಕೆ ಹೀಗೆ ಮಾಡಿ: ಲಕ್ಷಣಗಳು ಕಂಡ ತಕ್ಷಣ ವೈದ್ಯರ ಸಲಹೆಯ ಮೇರೆಗೆ ಔಷಧಿ ಸೇವಿಸಿ. (ತೊಂದರೆ ಮತ್ತೆ ಮತ್ತೆ ಆಗುತ್ತಿದ್ದರೆ ವಾರಕ್ಕೊಮ್ಮೆಯಂತೆ ಮೂರು ವರ್ಷ ಸತತ ಸೇವಿಸುವ ಕ್ರಮವೂ ಇದೆ.) ಲಕ್ಷಣಗಳು ಕಂಡಂದಿನಿಂದ ಗುಣವಾಗಿ ಒಂದು ವಾರದ ತನಕ ಯಾವುದೇ ಲೈಂಗಿಕ ಸಂಪರ್ಕ ಕೂಡದು!

ಲೈಂಗಿಕ ಸಹಾಯವಾಣಿ: ಲೈಂಗಿಕ ಸಮಸ್ಯೆಗಳ ತುರ್ತು ಪರಿಹಾರಕ್ಕಾಗಿ ಡಾ. ವಿನೋದ ಛೆಬ್ಬಿಯವರನ್ನು ಪ್ರತಿ ಮಂಗಳವಾರ ಮತ್ತು ಶುಕ್ರವಾರ ಮಧ್ಯಾಹ್ನ 2ರಿಂದ 4ರ ತನಕ ಬೆಂಗಳೂರಿನ ದೂರವಾಣಿಯ ಸಂಖ್ಯೆ (080) 23111666 ಅಥವಾ 23101205ರ ಮೂಲಕ ಸಂಪರ್ಕಿಸಬಹುದು. ದೂರವಾಣಿಯ ಸಂಪರ್ಕ ಸಿಗದಿದ್ದಲ್ಲಿ ಪತ್ರದ ಮೂಲಕ ತಮ್ಮ ಮೊಬೈಲ್ ಸಂಖ್ಯೆಯನ್ನು ತಿಳಿಸಿ ವೈದ್ಯರ ಉತ್ತರಕ್ಕಾಗಿ ಕಾಯಬಹುದು.

**ನಿಮ್ಮ ಪ್ರಶ್ನೆಗಳನ್ನು ಸಂಪಾದಕರು, 'ಸುಧಾ' 'ಸುಖೀಭವ' ವಿಭಾಗ, ನಂ. 75 ಎಂ.ಜಿ. ರಸ್ತೆ, ಬೆಂಗಳೂರು-01 ವಿಳಾಸಕ್ಕೆ ಕಳುಹಿಸಿ**